(೨೦)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ 2013-14ನೇ ಸಾಲಿನಲ್ಲಿ ಮೂರನೇ ತ್ರೈಮಾಸಿಕ ಯೋಜನೇತರ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ.

1. ಸರ್ಕಾರಿ ಆದೇಶಗಳ ಸಂಖ್ಯೆ: ಕೃಇ 22 ಕೃವಿಬೆ 2013, ದಿನಾಂಕ: 17-05-2013 ಮತ್ತು 07-08-2013.
2. ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ರವರ ದಿನಾಂಕ: 01-10-2013 ರ ಪತ್ರ ಸಂಖ್ಯೆ: ಹನಿಅ/ವಿಭಾಗ/3/ಸಿ5-1/2013-14.

ಪ್ರಸ್ತಾವನೆ:

2013-14 ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಯೋಜನೇತರ ಅನುದಾನ 11711.00ಲಕ್ಷಗಳನ್ನು ನಿಗದಿಪಡಿಸಿದ್ದು ಅದರಂತೆ ಮೇಲೆ (1)ರಲ್ಲಿ ಓದಲಾದ ದಿನಾಂಕ: 17-05-2013 ಮತ್ತು 07-08-2013ರ ಆದೇಶಗಳಲ್ಲಿ ರೂ. 2500.00 ಲಕ್ಷಗಳು + ರೂ 3355.50 ಲಕ್ಷಗಳು = ರೂ.5855.50 (ಐದು ಸಾವಿರದ ಎಂಟು ನೂರಾ ಐವತ್ತೈದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಲಕ್ಷಗಳನ್ನು ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಯೋಜನೇತರ ವೆಚ್ಚವಾಗಿ ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (2) ರ ದಿನಾಂಕ: 01-10-2013 ರ ಪತ್ರದಲ್ಲಿ ಸರ್ಕಾರವು ಜುಲೈ 2013 ರಲ್ಲಿ 2013-14ನೇ ಸಾಲಿಗೆ ಆಯವ್ಯಯದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯಕ್ಕೆ ಯೋಜನೇತರ ಅನುದಾನವಾಗಿ ರೂ. 11711.00 ಲಕ್ಷಗಳನ್ನು ನಿಗದಿಪಡಿಸಿದೆ. ಅದರಂತೆ ಅಕ್ಟೋಬರ್ 2013 ರಿಂದ ಡಿಸೆಂಬರ್ 2013 ರವರೆಗೆ ಬೋಧಕ ಮತ್ತು ಬೋಧಕೇತರ ವೇತನ, ಗುತ್ತಿಗೆದಾರರ ವೇತನ ಮತ್ತು ಇನ್ನಿತರ ಭತ್ಯೆಗಳನ್ನು ಭರಿಸಲು ಮೂರನೇ ತ್ರೈಮಾಸಿಕ ಅನುದಾನವಾಗಿ ರೂ.2927.75 ಲಕ್ಷಗಳನ್ನು (ಎರಡು ಸಾವಿರದ ಒಂಬೈನೂರಾ ಇಪ್ಪತ್ತೇಳು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಬಿಡುಗಡೆ ಮಾಡುವಂತೆ ಹಣಕಾಸು ನಿಯಂತ್ರಣಾಧಿಕಾರಿಗಳು, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕೃಇ 22 ಕೃವಿಬೆ 2013, ಬೆಂಗಳೂರು ದಿನಾಂಕ: 06-11-2013**

ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು 2013-14 ನೇ ಸಾಲಿಗೆ ಸಂಬಂಧಿಸಿದಂತೆ ಯೋಜನೇತರ ಲೆಕ್ಕ ಶೀರ್ಷಿಕೆ 2415-80-004-1-01 ರಡಿ (ಸಹಾಯಾನುದಾನ 101) ಒದಗಿಸಲಾಗಿರುವ ರೂ.11711.00 ಲಕ್ಷಗಳ ಪೈಕಿ ರೂ.2927.75 (ಎರಡು ಸಾವಿರದ ಒಂಬೈನೂರಾ ಇಪ್ಪತ್ತೇಳು ಲಕ್ಷದ ಎಪ್ಪತ್ತೈದು ಸಾವಿರ ರೂಪಾಯಿಗಳು ಮಾತ್ರ) ಲಕ್ಷಗಳನ್ನು ಮೂರನೇ ತ್ರೈಮಾಸಿಕ ಅನುದಾನವಾಗಿ ವೇತನ ಮತ್ತು ಇತರೆ ಭತ್ಯೆಗಳನ್ನು ಭರಿಸಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲಾಗಿದೆ.

- ಪ್ರತಿ ತ್ರೈಮಾಸಿಕ ಅನುದಾನವನ್ನು ಆಯಾ ತ್ರೈಮಾಸಿಕದ ಬಳಕೆ ಪ್ರಮಾಣ ಪತ್ರವನ್ನು ಒದಗಿಸಿ ಬಿಲ್ಲಿಗೆ ಮೇಲು ರುಜು ಪಡೆಯತಕ್ಕದ್ದು;
- ಸರ್ಕಾರವು ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡುವುದೋ ಅದೇ ಉದ್ದೇಶಕ್ಕಾಗಿ ಅನುದಾನವನ್ನು ಉಪಯೋಗಿಸತಕ್ಕದ್ದು;

...2

- ಸರ್ಕಾರವು ನೀಡಿದ ಸೂಚನೆ ಆದೇಶಗಳನುಸಾರ ಕೃಷಿ ವಿಶ್ವವಿದ್ಯಾಲಯದವರು ವೆಚ್ಚದಲ್ಲಿ ಕಟ್ಟುನಿಟ್ಟಾಗಿ ಮಿತವ್ಯಯವನ್ನು ಪಾಲಿಸತಕ್ಕದ್ದು;
- ಬಿಡುಗಡೆಯಾಗಿರುವ ಅನುದಾನದ ಬಗ್ಗೆ ಸೂಕ್ತ ಸಮಯದಲ್ಲಿ ಮಹಾಲೇಖಪಾಲರ ಲೆಕ್ಕಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳತಕ್ಕದ್ದು;
- ಬಿಡುಗಡೆ ಮಾಡಲಾಗಿರುವ ಅನುದಾನವು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಆರ್ಥಿಕ ಇಲಾಖೆಯು ನೀಡಬಹುದಾದ ಸೂಚನೆಗಳಿಗೆ ಒಳಪಟ್ಟಿರುತ್ತದೆ;
- ಆಯಾ ತಿಂಗಳಿಗೆ ಪ್ರತ್ಯೇಕ ಬಿಲ್ಲನ್ನು ಒದಗಿಸುವುದು;

2) ಬಿಡುಗಡೆಯಾಗಿರುವ ಅನುದಾನಕ್ಕೆ ಕೃಷಿ ವಿಶ್ವವಿದ್ಯಾಲಯದ ಹಣಕಾಸು ನಿಯಂತ್ರಣಾಧಿಕಾರಿಗಳು ಸಲ್ಲಿಸುವ ಬಿಲ್ಲಿಗೆ ಮೇಲು ರುಜು ಮಾಡುವ ಅಧಿಕಾರವನ್ನು ಸರ್ಕಾರದ ಅಧೀನ ಕಾರ್ಯದರ್ಶಿ (ಕೃಷಿ ಸೇವೆಗಳು), ಕೃಷಿ ಇಲಾಖೆ ಇವರಿಗೆ ನೀಡಲಾಗಿದೆ.

3) ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ 1 ಟಿಎಫ್‌ಪಿ 2013, ದಿನಾಂಕ: 10-5-2013ರಲ್ಲಿ ಆಡಳಿತಾತ್ಮಕ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಲಾದ ಆರ್ಥಿಕ ಅಧಿಕಾರದ ಮೇರೆಗೆ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ್ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 15 ಪ್ರತಿ ಒದಗಿಸಲು.

**ಪ್ರತಿಗಳು:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಕುಲಪತಿಗಳು/ ಹಣಕಾಸು ನಿಯಂತ್ರಣಾಧಿಕಾರಿಗಳು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
3. ರಾಜ್ಯ ಹುಜೂರು ಖಜಾನಾಧಿಕಾರಿಗಳು, ಬೆಂಗಳೂರು.
4. ಸರ್ಕಾರಿ ಲೆಕ್ಕ ಪರಿಶೋಧಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು.
5. ಉಪನಿರ್ದೇಶಕರು, ನೆಟ್ವರ್ಕ್ ಮ್ಯಾನೇಜ್ ಮೆಂಟ್ ಸೆಂಟರ್, ಖನಿಜ ಭವನ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದಶಿಗಳು, ಆರ್ಥಿಕ ಇಲಾಖೆ (ವೆಚ್ಚ-2 ಮತ್ತು 4) ವಿಧಾನಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು.
8. ಶಾಖಾ ರಕ್ಷಾಕಡತ/ ಹೆಚ್ಚುವರಿ ಪ್ರತಿಗಳು.